ಪ್ರಸ್ತಾವದ ಅಂಗೀಕಾರ

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು) :– ಮಾನ್ಯ ಅಧ್ಯಕ್ಷರೇ, 1990ರ ಕರ್ನಾಟಕ ಧನವಿನಿಯೋಗ (ನಂ. 3) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಉಪಾಧ್ಯಕ್ಷರು :– ಪ್ರಸ್ತಾವ ಏನೆಂದರೆ 1990ರ ಕರ್ನಾಟಕ ಧನವಿನಿಯೋಗ (ನಂ. 3) ವಿಧೇಯಕವನ್ನು ಅಂಗೀಕರಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

ಉಪಾಧ್ಯಕ್ಷೆಯವರು :– ಈಗ ನಿಯಮ 68ರ ಮೇರೆಗೆ ಅಲ್ಪಕಾಲಾವಧಿ ಚರ್ಚೆ.

ಸದನದಲ್ಲಿ ಸದಸ್ಯರ ಅನುಚಿತ ವರ್ತನೆ ಬಗ್ಗೆ ಪ್ರಸ್ತಾಪ

ಶ್ರೀ ಎಲ್.ಆರ್. ಶಿವರಾಮೇಗೌಡ :– ಮಾನ್ಯ ಸಭಾಧ್ಯಕ್ಷೆಯವರೇ ನಾನು ನಿನ್ನೆಯ ದಿವಸ ಒಂದು ನೋಟೀಸ್ ಕಳುಹಿಸಿದ್ದೆ. ಅದೇನೆಂದರೆ ನಿನ್ನೆಯ ದಿವಸ ಈ ಸದನದಲ್ಲಿ ಧರಣಿ ನಡೆಸತಕ್ಕಂಥ ಸಂದರ್ಭದಲ್ಲಿ....

(ಗೊಂದಲ)

ಶ್ರೀ ಎಲ್.ಆರ್. ಶಿವರಾಮೇಗೌಡ :– ಧರಣಿ ನಡೆಸಿರತಕ್ಕಂಥಾದ್ದು ಸರ್ವ ಸದಸ್ಯರ ಹಕ್ಕು. ಆದರೆ ಅದರಲ್ಲಿ ನಮ್ಮದು ಯಾರದು ಎರಡು ಮಾತು ಇಲ್ಲ. ಆದರೆ ಈ ಸದನದ ನಿಯಮಗಳನ್ನು ಯಾರೂ ಉಲ್ಲಂಘನೆ ಮಾಡುವುದಕ್ಕೆ ಅವಕಾಶ ಇಲ್ಲ. ಅದು ನಡೆದು ಇಲ್ಲ. ಆದರೆ ನಿನ್ನೆಯ ದಿವಸ ಧರಣಿ ನಡೆಸತಕ್ಕಂಥ ಸಂದರ್ಭದಲ್ಲಿ ಒಬ್ಬ ಸದಸ್ಯರು ಬೆಂಕಿ ಹಚ್ಚಿದ ಪ್ರಕರಣ ನಡೆಯಿತು.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ :– ಇದು ಸರಿಯಲ್ಲ ...

(ಗೊಂದಲ)

ಶ್ರೀ ಎಲ್.ಆರ್. ಶಿವರಾಮೇಗೌಡ :– ಮಾನ್ಯ ಅಧ್ಯಕ್ಷೆಯವರೇ, ನಿನ್ನೆ ದಿವಸ ಧರಣಿ ಕುಳಿತುಕೊಂಡ ಸಂದರ್ಭದಲ್ಲಿ ಜಿಲ್ಲಾ ಪರಿಷತ್ತು ತಿದ್ದುಪಡಿ ಮಸೂದೆಗೆ....

(ಗೊಂದಲ)

ಉಪಾಧ್ಯಕ್ಷರು :– ಈಗ ಆ ಸಂಬಂಧಪಟ್ಟ ಸದಸ್ಯರು ಸದನದಲ್ಲಿ ಇಲ್ಲ; ನಾಳೆ ದಿವಸ ನೋಡೋಣ. ಈಗ ನಿಯಮ 68ರ ಮೇರೆಗೆ ಚರ್ಚೆಯನ್ನು ತೆಗೆದುಕೊಳ್ಳೋಣ. ನಾಳೆ ಆ ಮಾನ್ಯ ಸದಸ್ಯರು ಸಭೆಯಲ್ಲಿ ಇದ್ದಾಗ ಪ್ರಸ್ತಾಪ ಮಾಡಿ.

(ಗೊಂದಲ)

† ಶ್ರೀ ಡಿ.ಬಿ. ಚಂದ್ರೇಗೌಡ :– ಒಂದೇ ಒಂದು ಮಾತು ಮಾನ್ಯ ಅಧ್ಯಕ್ಷೆಯವರೇ, ಇಲ್ಲಿ ಮಧುರವಾದ ವಾತಾವರಣವನ್ನು ಮೂಡಿಸುವುದಕ್ಕಾಗಿಯೇ ಎಲ್ಲಾ ಚರ್ಚೆ ಮಾಡಿ ಒಂದು ತೀರ್ಮಾನಕ್ಕೆ ಬರಲಾಗಿದೆ. ಕಳೆದ ಎರಡೂವರೆ ದಿವಸಗಳಿಂದ ನಡೆದಂಥ ಒಂದು ಪ್ರಕರಣ ನಮಗೇನು ನೆಮ್ಮದಿಯನ್ನು ಶಾಂತಿಯನ್ನು ಅಥವಾ ಸಮಾಧಾನವನ್ನು ತಂದಿಲ್ಲ. ಇದು ಆಗ ರದ್ದಾಗಿತ್ತು. ಆ ಪ್ರಕ್ರಿಯೆಯೊಳಗೆ ಏನು ನಡೆದಿದೆಯೋ ಆ ವಿಷಯವನ್ನು ಪ್ರತ್ಯೇಕವಾಗಿ ಮತ್ತೆ ಮತ್ತೆ ಇಲ್ಲಿ ಪ್ರಸ್ತಾಪ ಮಾಡುವುದು ಒಂದು ದೃಷ್ಟಿಯಿಂದ ಒಳ್ಳೆಯದಲ್ಲ. ಆ ಘಟನೆಯಿಂದ ಮನಸ್ಸು ನೊಂದು ವಿಷಾದ ವ್ಯಕ್ತ ಮಾಡತಕ್ಕಂಥ ಒಂದು ಪ್ರಯತ್ನ ಮಾಡಿದ್ದೇವೆ. ಆ ಪ್ರಕ್ರಿಯೆಯೊಳಗೇ ಇದೂ ಸಹ ಬರುತ್ತದೆ. ಆದ್ದರಿಂದ ಇದನ್ನು ಇಲ್ಲಿಗೇ ನಿಲ್ಲಿಸಬೇಕೆಂದು ನಾನು ನನ್ನ ಸಲಹೆ ಕೊಡುವುದಕ್ಕೆ ಬಯಸುತ್ತೇನೆ.

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು) :– ಮಾನ್ಯ ಸಭಾಧ್ಯಕ್ಷಣಿಯವರೇ, ಒಂದು ಒಳ್ಳೆಯ ವಾತಾವರಣವನ್ನು ಉಂಟು ಮಾಡಿ ಕಾರ್ಯಕಲಾಪ ನಡೆಸತಕ್ಕಂಥ ತೀರ್ಮಾನವನ್ನು ನಾವು ತೆಗೆದುಕೊಂಡಿದ್ದೇವೆ. ಮತ್ತೆ ಅದನ್ನು ರೀಕಪ್ ಮಾಡಬೇಕೆಂದು ನಾನು ಹೇಳುತ್ತಿಲ್ಲ. ಆ ಘಟನೆ ಬಗ್ಗೆ ತಾವೇ ವಿಚಾರ ಮಾಡಿದರೆ ಒಳ್ಳೆಯದು. ಏಕೆಂದರೆ ಅವರು ಸುಟ್ಟರು ಎಂಬುದು ರೆಕಾರ್ಡ್‌ನಲ್ಲಿ ಉಳಿದುಬಿಡುತ್ತದೆ. ನಾಳೆ ದಿವಸ ಹಾಗೆಯೇ ಇನ್ನೊಬ್ಬರು ಮಾಡಬಹುದು. ಆದ್ದರಿಂದ ನಾನು ಹೇಳತಕ್ಕಂತಾದ್ದು ಏನೆಂದರೆ ಆ ಮಾನ್ಯ ಸದಸ್ಯರಿಗೆ ತಾವೇ ತಿಳಿಸಿ. ಅದನ್ನು ಅವರೇ ವಿಚಾರ ಮಾಡಲಿ. ಆ ಕಡೆ ಇದಾಗ ಏನಾದರೂ ನಮ್ಮ ಕಡೆಯಿಂದ ತಪ್ಪಾಗಿದ್ದಾಗ ನಾವೇ ಎಷ್ಟೋ ಸಾರಿ ಕ್ಷಮೆ ಕೇಳಿದ್ದೇವೆ, ವಿಷಾದ ವ್ಯಕ್ತಪಡಿಸಿದ್ದೇವೆ. ಇದರಿಂದ ಸದನದ ಗೌರವ ಹೆಚ್ಚು ಮಾಡತಕ್ಕಂಥ ವಿಚಾರ ಇಷ್ಟೇ ಇದರಲ್ಲಿ ಇರುವುದು. ಎಲ್ಲಾ ವಿಷಯವೂ ಅದರಲ್ಲೇ ಕವರ್ ಆಗುತ್ತದೆ ಎನ್ನುವ ಅಭಿಪ್ರಾಯವನ್ನು ಹೇಳಿದರೆ ಆ ಪ್ರಶ್ನೆ ಪ್ರತ್ಯೇಕ. ಅದನ್ನು ನೀವೂ ಒಪ್ಪುವುದಿಲ್ಲವೆಂದು ನನಗೆ ಗೊತ್ತಿದೆ. ಅದನ್ನು ಯಾರೂ ಒಪ್ಪುವುದಿಲ್ಲ. ಇದರ ಮೇಲೆ ಇದನ್ನು ಅಧ್ಯಕ್ಷರ ಮುಖಾಂತರ ತಮ್ಮ ತೀರ್ಮಾನಕ್ಕೇ ಬಿಡುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ :– ಇದು ಮೊದಲನೇ ಪ್ರಕರಣ ಏನಲ್ಲ. ಬಹುಶಃ ಸಂಸದೀಯ ವಿಷಯಗಳಲ್ಲಿ ಅತ್ಯಂತ ಅನುಭವಿಗಳು ಹಾಗೂ ಹಿರಿಯರಾಗಿದ್ದಂಥ ಶ್ರೀಶಾಂತವೇರಿ ಗೋಪಾಲಗೌಡರು ಒಂದು ಸಾರಿ ರಾಜ್ಯಪಾಲರ ಭಾಷಣದ ಪ್ರತಿಯನ್ನು ನೆಲಕ್ಕೆ ಹಾಕಿ ತುಳಿದಂಥ ಪ್ರಸಂಗ ಇದೆ. ಆಮೇಲೆ ಅವರು ಮನ ನೊಂದು ತಾನು ಮಾಡಿದ್ದು ಸರಿಯಲ್ಲವೆಂದು ನೆನಪು ಮಾಡಿಕೊಂಡ ಪ್ರಸಂಗ ಎಲ್ಲರಿಗೂ ಗೊತ್ತಿದೆ. ಹಾವನೂರ್ ಕಮೀಷನ್ ವರದಿ ಬಂದಿದ್ದಾಗ ಅದಕ್ಕೆ ಬೆಂಕಿ ಹಚ್ಚುವುದಕ್ಕೆ ಪ್ರಯತ್ನ ಮಾಡಿದ ಪ್ರಕರಣವೂ ಇದೆಯೆಂದು ನಾನು ಹೇಳುತ್ತಿದ್ದೇನೆ. ಆಂದರೆ ವರದಿ ಬಂದಾಗ ಸದಸ್ಯರು ಅದಕ್ಕೆ ಬೆಂಕಿ ಹಚ್ಚತಕ್ಕಂಥ ಪ್ರಕರಣವೂ ನಡೆದಿದೆ. ಆದರೆ ಇಲ್ಲಿ ವಿಶೇಷವಾಗಿ ಒಬ್ಬ ವ್ಯಕ್ತಿ ಅಥವಾ ಒಬ್ಬ ಸದಸ್ಯ ಒಂದೇ ಕಾರಣಕ್ಕಾಗಿ ಮಾಡಿದ್ದು ಆದರೆ ಅದನ್ನು ಪ್ರತ್ಯೇಕಿಸಿ ನಾವು ಚರ್ಚೆ ಮಾಡಬಹುದು. ಆದರೆ, ಕಳೆದ ಮೂರು ದಿನಗಳಿಂದ ನಡೆದಂಥ ಒಟ್ಟಾರೆ ಪ್ರಕ್ರಿಯೆಯಲ್ಲಿ ಇದನ್ನು ಯಾರು ಮಾಡಿದರು, ಅದಕ್ಕೆ ಪಾಲುದಾರರು ಯಾರು? ಎಲ್ಲರೂ ಪಾಲುದಾರರೇ ಅಥವಾ ಒಬ್ಬ ವ್ಯಕ್ತಿ ಪಾಲುದಾರರೇ ಎಂಬ ಪ್ರಶ್ನೆಗಳು ಬರುತ್ತವೆ. ಆ ಪ್ರಕರಣದ ಬಗ್ಗೆ ನಮಗೂ ಸಮಾಧಾನವಾಗಿಲ್ಲವೆನ್ನುವ ಮಾತನ್ನು ನಾನು ಆಗಲೇ ಹೇಳಿದ್ದೇನೆ. ಇದರ ಮೇಲೂ ಕೂಡಾ ಇಂಥಾ ಪ್ರಕರಣಗಳು ನಡೆಯಬಾರದೆಂದು ನಾನು ಒಪ್ಪುತ್ತೇನೆ. ನಾವು ಹತ್ತಾರು ವರ್ಷಗಳ ಕಾಲ ಸಂಸತ್ತಿನಲ್ಲಿ ಮತ್ತು ಶಾಸನ ಸಭೆಗಳಲ್ಲಿ ಕೆಲಸ ಮಾಡಿದ ನಮಗೆ ಇದು ಯಾರ ಮನಸ್ಸಿಗೂ ನೆಮ್ಮದಿ ತರತಕ್ಕಂಥ ಕಾರ್ಯವಲ್ಲ. ಆದ್ದರಿಂದ ಆ ಸಂದರ್ಭದಲ್ಲಿ ನಡೆದಂಥ ಪ್ರಕರಣದ ಬಗ್ಗೆ ಮಾನ್ಯ ಸದಸ್ಯರು ಪುನಃ ಏನು ಒಂದು ನೋಟೀಸ್ ಮೂಲಕ ತರುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ, ಪುನಃ ಆ ಬಗ್ಗೆ ಆ ಪ್ರಯತ್ನ ಮಾಡಬಾರದು; ಇನ್ನು ಮುಂದೆ ನಮ್ಮ ಪಕ್ಷದ ಸದಸ್ಯರಿಂದ ಈ ತರಹ ಘಟನೆಗಳು ನಡೆಯದ ಹಾಗೆ ನೋಡಿಕೊಳ್ಳುವ ಜವಾಬ್ದಾರಿಯನ್ನು ಹೊತ್ತುಕೊಳ್ಳುವುದಕ್ಕೆ ನಾನು ಸಿದ್ದನಿದ್ದೇನೆ. ಅದಕ್ಕಾಗಿ ಯಾರ ಮನಸ್ಸಿಗಾದರೂ ನೋವಾಗಿದ್ದರೆ ಆ ಪ್ರಕರಣದ ಬಗ್ಗೆ ನನ್ನದು ನೋವು ಭಾವನೆ ಮಾಡುತ್ತೇನೆ. ಇನ್ನು ಮುಂದೆ ಇಂಥ ಕೆಲಸಕ್ಕೆ ಅವಕಾಶ ಕೊಡುವುದಿಲ್ಲವೆಂದು ಹೇಳಿ, ಅದು ವಿಷಾದನೀಯ ಎಂಬುದನ್ನು ಒಪ್ಪಿಕೊಂಡು, ಈ ವಿಚಾರವನ್ನು ಇಲ್ಲಿಗೇ ಮುಗಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ರಮಾನಾಥ ರೈ :– ಕಳೆದ ಬಾರಿ ನಮ್ಮ ಪಕ್ಷದ ಮಾನ್ಯ ಸದಸ್ಯರಾಗಿದ್ದ ಉಮರಬ್ಬ ಅವರು ಯಾವುದೋ ಕಾರಣಕ್ಕೆ ಒಂದು ಕಾಲನ್ನು ಮೇಲಕ್ಕೆ ಎತ್ತಿದ್ದಕ್ಕೆ ಸಸ್ಪೆಂಡ್ ಮಾಡುವುದಕ್ಕೆ ಹೊರಟಿದ್ದವರು ನೀವು. ಆದರೆ ನಾವು ಆ ಸಂದರ್ಭದಲ್ಲಿಯೂ ಸೌಜನ್ಯದಿಂದ ಇದ್ದೆವು.

ಶ್ರೀ ಎಲ್.ಆರ್. ಶಿವರಾಮೇಗೌಡ :– ನಮ್ಮ ನಾಯಕರು ಹೇಳಿದಂತೆ ನಾವು ಇಲ್ಲಿ ನಡೆದುಕೊಳ್ಳುತ್ತಿದ್ದೇವೆ.

ಶ್ರೀ ವಾಟಾಳ್ ನಾಗರಾಜ್ :– ಶ್ರೀ ಶಿವರಾಮೇಗೌಡರು ಎಷ್ಟು ಬಂದೋಬಸ್ತಾಗಿ ನಮ್ಮ ನಾಯಕರು ಎಂದು ಹೇಳುತ್ತಿದ್ದಾರೆ. ಇದುವರೆಗೆ ವೀರೇಂದ್ರ ಪಾಟೀಲರು ನಮ್ಮ ನಾಯಕರು ಎಂದು ಹೇಳುತ್ತಿದ್ದರು. ಇವೊತ್ತು ನಿಮ್ಮನ್ನು ನಾಯಕರೆಂದು ಅನ್ನುತ್ತಾರೆ. ಮುಂದೆ ಯಾರನ್ನು ಅನ್ನುತ್ತಾರೋ ಗೊತ್ತಿಲ್ಲ ಇವರನ್ನು ದೇವರೇ ಕಾಪಾಡಬೇಕು.

ಶ್ರೀ ಎಂ. ರಾಮಪ್ಪ :– ನಮಗೆ ಏನು ಅಂದರೆ ವಾಟಾಳ್ ನಾಗರಾಜ್ ತರಹ ಜಾತಿ ವಾದಿಗಳಲ್ಲ ನಮ್ಮ ಶಿವರಾಮೇಗೌಡರು. ಇವರು ಜಾತಿವಾದಿಗಳೆಂದು ಮೊನ್ನೆ ಹೇಳಿದ್ದಾರೆ. ನಾವು ಕೇಳಿದ್ದೇವೆ. ಇದು ನಮ್ಮೆಲ್ಲರಿಗೂ ಅರ್ಥ ಆಗಿದೆ. ಯಾಕೆಂದರೆ ತಮ್ಮ ಭಾಷಣ ನಡವಳಿಕೆ ಇದೆಲ್ಲ ನೋಡಿದಾಗ ನಿಮ್ಮಂತಹ ಜಾತಿವಾದಿಗಳು ಇನ್ನು ಯಾರೂ ಇಲ್ಲ ಅಂತ ಗೊತ್ತಾಗುತ್ತದೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ :– ಇದು ಬೇಕಂತಲೇ ರೇಗಿಸುವುದಕ್ಕೆ ಹೇಳತಕ್ಕ ಮಾತು. ಇದು ಸತ್ಯಕ್ಕೆ ದೂರವಾದ ಮಾತು.

ಉಪಾಧ್ಯಕ್ಷರು :– ನಾವು ಬಹಳ ಸಮಯ ಕಳೆದಿದ್ದೇವೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ :– ಯಾರು ಜಾತಿವಾದಿಗಳು? ಇದು ಸತ್ಯಕ್ಕೆ ದೂರವಾದ ಮಾತು. ಒಬ್ಬ ಜಾತಿವಾದಿ ರಾಮಪ್ಪನವರು ಹೇಳುತ್ತಾ ಇರುವುದು.

ಶ್ರೀ ಎಂ. ರಾಮಪ್ಪ :– ರೆಕಾರ್ಡ್‌ನಲ್ಲಿ ಇದೆ.

(ಗೊಂದಲ)

ಉಪಾಧ್ಯಕ್ಷರು :– ಪ್ರೊಫೆಸರ್ ನಂಜುಂಡಸ್ವಾಮಿಯವರು ಈಗ ತಮ್ಮ ಭಾಷಣವನ್ನು ಪ್ರಾರಂಭ ಮಾಡಬೇಕು.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ :– ಇದು ಬೇಜವಾಬ್ದಾರಿಯಿಂದ ಹೇಳತಕ್ಕ ಮಾತು. ನಾಲಿಗೆ ತಪ್ಪು ಮಾತನಾಡುತ್ತಾ ಇರತಕ್ಕದ್ದು. ಈ ರೀತಿ ಮಾತನಾಡಬಾರದು. ಇಲ್ಲಿ ಯಾರು ಜಾತಿವಾದಿಗಳು. ಇದು ಅವಿವೇಕದ ಪರಮಾವಧಿ. ಅವರು ಬಾಯಿಗೆ ಬಂದ ಹಾಗೆ ಮಾತನಾಡುತ್ತಾರೆ ಜಾತಿವಾದಿಗಳೆಂದು. ನಾನು ಜಾತಿವಾದಿ ಎಂದು ಹೇಳಿ ತಾವು ಹೇಳುವುದು ಸರಿಯಲ್ಲ. ಮಾನ್ಯ ಮುಖ್ಯಮಂತ್ರಿಗಳನ್ನು ಬೇಕಾದರೆ ಕೇಳಿ. ನಾನು ಮೂವತ್ತು ವರ್ಷಗಳ ಕಾಲ ಅವರ ಜೊತೆ ಇದ್ದೇನೆ. ನಾನೂ ಅವರೂ ಸ್ನೇಹಿತರು. ಜಾತಿವಾದಿ ಎಂದು ಹೇಳುವುದು ಸರಿಯೇ? ನಾನು ಜಾತಿ ಎಂದು ಹೇಳಿದ್ದೇನೆಯೇ ನೀವು ಹೇಳಬೇಕು. ಎಲ್ಲಿದೆ ಜಾತಿ? ಇಂತಹ ಜಾತಿ ಎಂದು ನಾನು ಎಲ್ಲಿ ಇಟ್ಟುಕೊಂಡಿದ್ದೇನೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ :– 30 ವರ್ಷದ ರಾಜಕೀಯ ಜೀವನದಲ್ಲಿ ಎಲ್ಲಾದರೂ ಈ ರೀತಿ ನಡೆದುಕೊಂಡಿದ್ದೇನೆಯೇ? ಏನು ಅವಿವೇಕದ ಮಾತು? ಬಾಯಿಗೆ ಬಂದಂತೆ ಮಾತನಾಡುತ್ತಿದ್ದಾರೆ.

(ಗೊಂದಲ)

ಉಪಾಧ್ಯಕ್ಷರು :– ಶ್ರೀಯುತ ನಂಜುಂಡಸ್ವಾಮಿಯವರೇ ತಾವು ಪ್ರಾರಂಭ ಮಾಡಿ....

ಶ್ರೀ ಡಿ.ಬಿ. ಚಂದ್ರೇಗೌಡ :– ಹಾಗಿದ್ದರೆ ಒಂದು ಕೆಲಸ ಮಾಡೋಣ. ಇದನ್ನು ಕೂಡ ತಾವು ಪ್ರಿವಿಲೇಜ್ ಸಮಿತಿಗೆ ಒಪ್ಪಿಸೋಣ ಅವರು ಪ್ರೂವ್ ಮಾಡಲಿ, ಕಡತವನ್ನೇ ತೆಗೆಸೋಣ. ಹೀಗೆ ಮಾತನಾಡುವಂಥಾದ್ದು ಸರಿಯೇ?

ಶ್ರೀ ವಾಟಾಳ್ ನಾಗರಾಜ್ :– ನಾನು ಹಕ್ಕುಚ್ಯುತಿ ತರುತ್ತೇನೆ ...

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ :– ನನ್ನ ಇಡೀ ರಾಜಕೀಯ ಜೀವನದಲ್ಲಿ ಜಾತಿ ಮಾಡಿಲ್ಲ. ಯಾವುದೇ ಜಾತಿ ಇಲ್ಲದೇ ಇರತಕ್ಕಂಥ ಮನುಷ್ಯ ನಾನು. ಇದೇ ಸ್ಥಳದಲ್ಲಿ ಗೋಪಾಲಗೌಡರು, ನಾನು, ಬಂಗಾರಪ್ಪ ಎಲ್ಲ ಕುಳಿತಿದ್ದೇವೆ. ನಮ್ಮ ಜೀವನದಲ್ಲಿ ಜಾತಿ ಮಾಡಿಲ್ಲ. ಜಾತಿ ಎಂದು ಏಕೆ ಮಾಡಬೇಕು. ಜಾತಿ ಮಾಡುವುದಾಗಿದ್ದರೆ ಈ ಪರಿಸ್ಥಿತಿಯಲ್ಲಿ 17 ವರ್ಷ ಆದ ಮೇಲೆ ಮತ್ತೆ ಅಧಿಕಾರಕ್ಕೆ ಹೋರಾಟ ಮಾಡಿ ಬರಬೇಕಾಗಿರಲಿಲ್ಲ. ಜಾತಿ ಹೆಸರು ಹೇಳಿಕೊಂಡು ಚಮಚಾಗಿರಿ ಮಾಡಿದ್ದರೆ ಏನು ಬೇಕಾದರೂ ಆಗಬಹುದಿತ್ತು.

(ಗೊಂದಲ)

ಉಪಾಧ್ಯಕ್ಷರು :– ಶ್ರೀಯುತ ನಂಜಂಡಸ್ವಾಮಿಯವರೇ ತಾವು ದಯವಿಟ್ಟು ಪ್ರಾರಂಭ ಮಾಡಿ.

ನಿಯಮ 68ರ ಮೇರೆಗೆ ಅಲ್ಪಕಾಲಾವಧಿ ಚರ್ಚೆ

ರಾಜ್ಯದಲ್ಲಿನ ಬರಗಾಲ ಪರಿಸ್ಥಿತಿಯ ಬಗ್ಗೆ

† ಪ್ರೊ. ಎಂ.ಡಿ. ನಂಜುಂಡಸ್ವಾಮಿ (ಧಾರವಾಡ ಗ್ರಾಮಾಂತರ) :– ಮಾನ್ಯ ಸಭಾಧ್ಯಕ್ಷೆಣಿಯವರೇ, ಬರಗಾಲದ ಬಗ್ಗೆ ಮಾತನಾಡುವುದಕ್ಕೆ ಮುಂಚೆ ಈಗ ಸ್ವಲ್ಪ ಸಮಯದ ಹಿಂದೆ ನಾನು ಕಾನೂನು ಉಲ್ಲಂಘನೆ ಮಾಡಿದ ಬಗ್ಗೆ ತಮ್ಮ ಕ್ಷಮಾಪಣೆ ಮತ್ತು ಸದಸ್ಯರು ಕ್ಷಮಾಪಣೆಯನ್ನು ಕೇಳುತ್ತೇನೆ. ಅದರ ಉದ್ದೇಶ ಇಷ್ಟೇ; ನಮ್ಮ ಜೊತೆ ಇರುವಂತಹ ಸರ್ಕಾರೀ ನೀತಿಗಳು ಯಾವ ರೀತಿ ತಾರತಮ್ಯದ ಅಂಶಗಳನ್ನು ಒಳಗೊಂಡಿದೆ ಎಂದು ಎತ್ತಿ ತೋರಿಸುವುದಕ್ಕೋಸ್ಕರವಾಗಿ ನಾನು ಕಾನೂನು ಭಂಗ ಮಾಡಬೇಕಾಯಿತು. ಅಂತಹ ವೈತ್ಯಾಸದ ಅಂಶಗಳು ಬರಗಾಲಕ್ಕೆ ಸಂಬಂಧಪಟ್ಟಂತೆ ಕೂಡ ಇವೆ. ಈಗ ಎರಡು ಮೂರು ದಿವಸದಿಂದ ನಡೆಯುತ್ತಿರುವ ಚರ್ಚೆಯಲ್ಲಿ ಬರಗಾಲವೆಂದು ಘೋಷಿಸುವ ಸೂತ್ರಗಳ ಬಗ್ಗೆ ಬಹಳ ಚರ್ಚೆ ಆಯಿತು. ಬರಗಾಲವೆಂದು ಘೋಷಣೆ ಮಾಡಬೇಕಾದರೆ ಏನು ಸೂತ್ರಗಳನ್ನು ಅಳವಡಿಸಿಕೊಂಡಿದ್ದೇವೆ? ಇದರ ಬಗ್ಗೆ ಚರ್ಚೆ ಮಾಡಿದಂತಹ ನಮ್ಮ ಸ್ನೇಹಿತರುಗಳು ಅಣೆವಾರಿ ಪದ್ಧತಿ ಬಗ್ಗೆ ಬಹಳ ಟೀಕೆಗಳನ್ನು ಮಾಡಿದ್ದಾರೆ. ಹಾಗೆಯೇ ನಮ್ಮ ವಿಲೇಜ್ ಆಕೌಂಟೆಂಟ್‌ಗಳು ಕೆಲಸ ಮಾಡುವ ರೀತಿ ಬಗ್ಗೆಯೂ ಸಹ ಟೀಕೆಯನ್ನು ಮಾಡಿದ್ದಾರೆ. ಹಾಗೆಯೇ ನಮ್ಮ ಐ.ಎ.ಎಸ್. ಅಧಿಕಾರಿಗಳು ಹೇಗೆ ಸ್ಯಾಟಲೈಟ್ ಚಿತ್ರ ಉಪಯೋಗಿಸುವಂತಹ ಪ್ರಯತ್ನ ಮಾಡುತ್ತಿದ್ದಾರೆನ್ನುವ ಬಗ್ಗೆಯೂ ಟೀಕೆಗಳು ಬಂದಿವೆ. ಇವೊತ್ತು ಕೂಡ ಈ ಸದನದ ಮುಂದೆ ಬಂದಂಥ ಪ್ರಶ್ನೆಗಳು, ಅದರಲ್ಲಿ ಅಣೆವಾರಿ ಬಗ್ಗೆ ...

(ಈ ಹಂತದಲ್ಲಿ ಮಾನ್ಯ ಮುಖ್ಯಮಂತ್ರಿಯವರ ಸಮೀಪದಲ್ಲಿ ವಿಧಾನಮಂಡಲದ ಅಧಿಕಾರಿಯವರು ಮತ್ತು ಮಾನ್ಯ ಸದಸ್ಯರಿಬ್ಬರು ಮಾತನಾಡುತ್ತಿದ್ದರು)

ಪ್ರೊ. ಎಂ.ಡಿ. ನಂಜುಂಡಸ್ವಾಮಿ :– ಈ ಚಟುವಟಿಕೆ ಇದ್ದರೆ ನಾನು ಮಾತನಾಡುವುದಿಲ್ಲ... ನಾನು ನನ್ನ ಮಾತನ್ನು ಸೀಮಿತಗೊಳಿಸುತ್ತೇನೆ.

ಉಪಾಧ್ಯಕ್ಷರು :– ಮಾನ್ಯ ಮಂತ್ರಿಗಳು ಕೇಳುತ್ತಿದ್ದಾರೆ. ತಾವು ಮುಂದುವರೆಸಿ.

ಶ್ರೀ ಎಸ್. ಬಂಗಾರಪ್ಪ :– ತಾವು ಮಾತನಾಡಬಾರದು ಎಂದು ನನ್ನ ಅಭಿಪ್ರಾಯ ಅಲ್ಲ. ಈ ಚರ್ಚೆಯಲ್ಲಿ ಎಷ್ಟು ಜನರು ಮಾತನಾಡಿದ್ದಾರೆ. ಇನ್ನೂ ಎಷ್ಟು ಜನರು ಮಾತನಾಡುವವರು ಇದ್ದಾರೆ ಎಂದು ನಾನು ಸಂಬಂಧಪಟ್ಟವರಲ್ಲಿ ಹಾಗೂ ವಿರೋಧಿ ಪಕ್ಷದ ನಾಯಕರನ್ನು ಕೇಳುತ್ತಾ ಇದ್ದೇನೆ. ತಾವು ತಮ್ಮ ಮಾತನ್ನು ದಯಮಾಡಿ ಮುಂದುವರಿಸಿ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ :– ನಾನು ಚರ್ಚೆ ಪ್ರಾರಂಭವಾದ ನಡುವೆ ಒಂದು ಸಾರಿ ಹೇಳಿದ್ದೆ. ಕಂದಾಯ ಸಚಿವರ ಜೊತೆಗೆ ಬರಗಾಲದ ಬಗ್ಗೆ ಚರ್ಚೆ ನಡೆಯುವಾಗ ಮುಖ್ಯವಾಗಿ ನೀರಾವರಿ ಮಂತ್ರಿಗಳು, ಸಹಕಾರಿ ಮಂತ್ರಿಗಳು, ವಿದ್ಯುತ್ ಮಂತ್ರಿಗಳು, ಕೈಗಾರಿಕಾ ಮಂತ್ರಿಗಳು ಇದ್ದರೆ ನಾವು ಇಂಥ ನಿಷ್ಪ್ರಯೋಜಕ ಕಾರ್ಯಕ್ರಮಗಳನ್ನು ಪ್ರತಿವರ್ಷವೂ ಹಾಕಿಕೊಳ್ಳುವುದನ್ನು ಕೈಬಿಟ್ಟು, ಅದರ ಬದಲಾಗಿ ಶಾಶ್ವತ ಬರಗಾಲ